Rotary

ರೋಟರಿ **ಐಸಿರಿ** ಪರ್ಕಳ

ವಲಯ-4, ರೋ. ಜಿಲ್ಲೆ-3182

ನಮ್ಮ ನಡೆ... ಕೃಷಿಯ ಕಡೆ...

UNITE FOR GOOD



Rtn. Francesco Arezzo
R.I. President



Rtn. K. Palaksha
District Governor

# ಐಶ್ವರ್ಯ

ಸಂಪುಟ: 4 ಸಾಪ್ತಾಹಿಕ ಸಂಚಿಕೆ : 8

ದಿನಾಂಕ: 25.08.2025



Rtn. Anil Kumar
President



Rtn. Krishnappa
Secretary

## ವಲಯ ಸೇನಾನಿ ರೊ. ಸ್ಮಿತಾ ಕಾಮತ್‌ರವರಿಂದ ಓರಿಯಂಟೇಷನ್ ಕಾರ್ಯಕ್ರಮ






ಆಗಸ್ಟ್ 19ರ ಮಂಗಳವಾರದಂದು ರೋಟರಿ ಐಸಿರಿ ಸದಸ್ಯರಿಗೆ ಓರಿಯಂಟೇಷನ್ ಕಾರ್ಯಕ್ರಮವು ನಡೆಯಿತು. ಪರ್ಕಳ ಡೆಂಟಲ್ ಕ್ಲಿನಿಕ ಸುಸಜ್ಜಿತ ಹವಾನಿಯಂತ್ರಿತ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ನಮ್ಮ ಸ್ಥಾಪಕ ಸದಸ್ಯೆ, ಪ್ರಸ್ತುತ ರೋಟರಿ ಜಿಲ್ಲೆ 3182ರ ವಲಯ ಸೇನಾನಿ ರೊ. ಸ್ಮಿತಾ ಕಾಮತ್ ರವರು ಸಂಪನ್ಮೂಲ ವ್ಯಕ್ತಿಯಾಗಿದ್ದರು.

ರೋಟರಿ ಸಂಸ್ಥೆ ಹೇಗೆ ಆರಂಭವಾಯಿತು. ಆರಂಭವಾಗಲು ಕಾರಣವಾದ ಮೂಲ ಉದ್ದೇಶವೇನು ? ಹೇಗೆ ದೇಶದಿಂದ ದೇಶಕ್ಕೆ ಹರಡುತ್ತಾ ವಿಶ್ವದಾದ್ಯಂತ ಪಸರಿಸಿತು. ಸದಸ್ಯರಾಗಲು ಏನು ಮಾಡಬೇಕು ? ಸದಸ್ಯರಾದವರು ಏನು ಮಾಡಬೇಕು ? ರೋಟರಿ ಸಂಸ್ಥೆಯ ದೂರದೃಷ್ಟಿ ಏನು ? ರೋಟರು ಪ್ರಮುಖ ಮೌಲ್ಯಗಳು ಯಾವುವು ? ರೋಟರಿಯಿಂದ ಸೇವೆ – ಸಹಭಾಗಿತ್ವ – ಒಡನಾಟ – ಸಮಗ್ರತೆ – ನಾಯಕತ್ವ ಬೆಳೆಯಲು ಹೇಗೆ ಸಾಧ್ಯ ವಾಗುತ್ತದೆ ? ರೋಟರಿಗಾಗಿ ನೀಡುವ ಸದಸ್ಯತ್ವ ಶುಲ್ಕ, ದೇಣಿಗೆಗಳು ಹೇಗೆ ಸ್ಥಳೀಯವಾಗಿ ಸಮುದಾಯ ಅನುಕೂಲವಾಗಿ ಮಾರ್ಪಾಡಾಗುತ್ತದೆ ? ಮನುಕುಲದ ಏಳಿಗೆಗೆ ರೋಟರಿಗೆ ಇರುವ ಜಾಗತಿಕ ಜವಾಬ್ದಾರಿ ಏನು ? ಬದ್ಧತೆ ಏನು ? ರೋಟರಿ ಇದನ್ನು ಪಾರದರ್ಶಕವಾಗಿ ಹೇಗೆ ನಿರ್ವಹಿಸುತ್ತದೆ ? ಎಂಬಿತ್ಯಾದಿ ಹಲವಾರು ವಿಷಯಗಳ ಬಗ್ಗೆ ಬೆಳಕು ಚೆಲ್ಲಿ ರೋಟರಿ ಸಂಸ್ಥೆಯ ಸಮಗ್ರ ಚಿತ್ರಣವನ್ನು ಸದಸ್ಯರಿಗೆ ನೀಡಿದರು.

ಈ ಕಾರ್ಯಕ್ರಮದ ಬಗ್ಗೆ, ಹೊಸ ಸದಸ್ಯರಾದ ರೊ. ಕೊರಗಪ್ಪ ಶೆಟ್ಟಿಗಾರ್, ರೊ. ಸುದರ್ಶನ್ ಪೈ, ಸ್ಥಾಪಕಾಧ್ಯಕ್ಷರಾದ ರೊ. ಕೆ. ಪ್ರಭಾಕರ ಶೆಟ್ಟಿ, Past A.G. ರೊ. ಎಂ. ಮಂಜುನಾಥ ಉಪಾಧ್ಯ, ಹಿರಿಯ ಸದಸ್ಯ ರೊ. ಸುಕೇಶ್ ಕುಂದರ್, Past A.G. ರೊ. ಡಾ. ಎ. ಗಣೇಶ ಮಾತನಾಡಿ ತಮಗೆ ದೊರೆತ ರೋಟರಿ ಮಾಹಿತಿಯ ಬಗ್ಗೆ, ಪ್ರಸ್ತುತ ಪಡಿಸಿದ ರೀತಿಯ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದರು.

ಆರಂಭದಲ್ಲಿ ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್ ರವರು ಅಧ್ಯಕ್ಷ ರೊ. ಅನಿಲ್ ಕುಮಾರ್ ರವರಿಗೆ ಕೊರಳ ಲಾಂಛನ ತೊಡಿಸಿದರು. ಅಧ್ಯಕ್ಷರು ಸಭಾರಂಭದ ಘೋಷಣೆ ಮಾಡಿದ ಬಳಿಕ ರೊ. ಡಾ. ಎ. ಗಣೇಶ ಪ್ರಾರ್ಥನೆ ನಡೆಸಿದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಕಳೆದ ವಾರದ ವರದಿಯನ್ನು ಮಂಡಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಇಂದಿನ ಈ ಕಾರ್ಯಕ್ರಮದ ಪ್ರಸ್ತುತಿಗಾಗಿ ರೊ. ಸ್ಮಿತಾ ಕಾಮತ್ ಅವರನ್ನು ಮತ್ತು ಈ ಕಾರ್ಯಕ್ರಮಕ್ಕೆ ಉತ್ತಮ ಸಭಾಂಗಣ ಒದಗಿಸಿದ್ದಕ್ಕಾಗಿ ರೊ. ಡಾ. ಸ್ವಾತಿ ಪೈಯವರನ್ನು ಕೃತಜ್ಞತಾಪೂರ್ವಕವಾಗಿ ಅಭಿನಂದಿಸಿ ಗೌರವಿಸಿದರು.

ವಾರದ ಸಭೆಯ ಕಲಾಪಗಳು ಮುಂದುವರೆದು, ಸಾಪ್ತಾಹಿಕ ಸಂಚಿಕೆಯ ಬಿಡುಗಡೆ, ಲಕ್ಕಿ ರೊಟೇರಿಯನ್ ಆಯ್ಕೆ ಇತ್ಯಾದಿಗಳು ನಡೆದವು. ಕೊನೆಯಲ್ಲಿ ಕಾರ್ಯದರ್ಶಿ ರೊ. ಕೃಷ್ಣಪ್ಪ ರವರು ಧನ್ಯವಾದ ಸಮರ್ಪಣೆಗೈದರು.




ಆಗಸ್ಟ್ 23ರಂದು ಪರ್ಕಳದ ಸುರಕ್ಷಾ ಸಭಾಭವನದಲ್ಲಿ ನಡೆದ, ರೋಟರಿ ಜಿಲ್ಲೆ 3182ರ ವಲಯ 4ರ Membership Development and Public Image ವಲಯ ಸೆಮಿನಾರ್ "ಆರೋಹಣ"ದಲ್ಲಿ ರೋಟರಿ ಐಸಿರಿಯ ಸದಸ್ಯರಾದ ವಲಯ ಸೇನಾನಿ ರೊ. ಸ್ಮಿತಾ ಕಾಮತ್ ಮತ್ತು Zonal Learning Facilitator ರೊ. ಡಾ. ಎ. ಗಣೇಶ ಅತಿಥಿಗಳಾಗಿ ಭಾಗವಹಿಸಿದ್ದರು.

## ಪ್ರೇರಣಾ ಸಿರಿ:

The Rotary Foundation has indeed invested over $148 million globally in programs focused on water, sanitation, and hygiene (WASH) and water resource management, aiming to provide communities with sustainable access to clean water and improve health and education outcomes.

These initiatives include installing wells, water treatment systems, and hygiene infrastructure, alongside comprehensive training programs to empower communities to manage their water resources effectively.

Rotary supports activities encouraging managing and protecting freshwater resources and providing universal and equitable access to safe drinking water, sanitation, and hygiene.

TRF seeks to empower governments, institutions, and communities to manage their water, sanitation, and hygiene services through environmentally sound, measurable, and sustainable interventions.

Rotary seeks to empower governments, institutions, and communities to manage water, sanitation, and hygiene services through environmentally sustainable, measurable interventions.

Rotary members work towards decreasing waterborne diseases to help children stay healthier and attend school regularly. Access to clean water and sanitation can also help women spend less time carrying fresh water from far-off waterbodies, enabling them to be there for their families instead.

**Key Interventions**

Facilitating universal and equitable access to safe and affordable drinking water.

Improving water quality by protecting and maintaining surface and ground water resources.

Improved sanitisation and waste management services to achieve open defecation free communities.

## ಬೌದ್ಧಿಕ ಸಿರಿ

ಆತ ಟೋಪಿ ಮಾರಾಟಗಾರ. ಬುಟ್ಟಿ ತುಂಬಾ ಟೋಪಿಗಳನ್ನು ಹೊತ್ತುಕೊಂಡು ಊರಿಂದ ಊರಿಗೆ ಹೋಗಿ ಮಾರಾಟ ಮಾಡಿ ಜೀವನ ಮಾಡುತ್ತಿದ್ದ.

ಯಾವುದಾದರೂ ದೊಡ್ಡ ಮರದ ಬುಡದಲ್ಲಿ ಕುಳಿತು ಊಟ ಮಾಡಿ ಸ್ವಲ್ಪ ಹೊತ್ತು ನಿದ್ದೆಯನ್ನು ಮಾಡಿ ಆಯಾಸ ಪರಿಹರಿಸಿ ಕೊಂಡು ಮುಂದಿನ ಊರಿನತ್ತ ಪ್ರಯಾಣ ಮಾಡುತ್ತಿದ್ದ.

ಹೀಗೆ ಒಂದು ದಿನ ಆತ ವಿರಮಿಸುತ್ತಿದ್ದ ಮರದ ಮೇಲೆ ಕೋತಿಗಳಿದ್ದವು. ಒಂದು ಕೋತಿ ಬಂದು ಈತನ ಬುಟ್ಟಿಯಿಂದ ಒಂದು ಟೋಪಿಯನ್ನು ಹೊತ್ತೊಯ್ದಿತು. ಅದನ್ನು ಕಂಡ ಇತರ ಕೋತಿಗಳೂ ಬಂದು ಟೋಪಿಗಳನ್ನು ಹೊತ್ತೈದವು.

ಎಚ್ಚೆತ್ತುಕೊಂಡ ವ್ಯಾಪಾರಿಗೆ ಒಂದು ಉಪಾಯ ಹೊಳೆಯಿತು. ಮಂಗ ನಾವು ಮಾಡಿದ್ದನ್ನೇ ಅನುಕರಿಸುತ್ತದೆ ಎಂದು ಆತ ತಿಳಿದಿದ್ದನು. ಹಾಗಾಗಿ ತನ್ನ ತಲೆಯ ಮೇಲಿದ್ದ ಟೋಪಿಯನ್ನು ತೆಗೆದು ನೆಲಕ್ಕೆ ಬಿಸಾಡಿದನು.

ಇದನ್ನು ನೋಡಿದ ಕೋತಿಗಳೆಲ್ಲವೂ ತಮ್ಮ ಕೈಲಿದ್ದ ಟೋಪಿಗಳನ್ನು ನೆಲಕ್ಕೆ ಬಿಸಾಡಿದವು. ವ್ಯಾಪಾರಿ ಸಂತೋಷದಿಂದ ಅವನ್ನೆಲ್ಲ ಹೆಕ್ಕಿಕೊಂಡು ತನ್ನ ಪ್ರಯಾಣ ಮುಂದುವರಿಸಿದೆ.

ಈ ಕಥೆಯನ್ನು ಈತ ತನ್ನ ಮಗನಿಗೆ, ಮುಂದೆ ಮಗನು ಮೊಮ್ಮಮಗನಿಗೆ ಹೇಳಿಕೊಟ್ಟನು.

ಹಲವಾರು ವರ್ಷಗಳ ನಂತರ ಆ ಮೊಮ್ಮಗನು ಅಜ್ಜನ ವ್ಯಾಪಾರವನ್ನು ಮುಂದುವರಿಸುತ್ತಾ ಇಂಥದೇ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡ.

ಆಗ ಆತನಿಗೆ ಅಜ್ಜ ಮಾಡಿದ ಉಪಾಯ ನೆನಪಿಗೆ ಬಂತು. ತನ್ನ ತಲೆಯಲ್ಲಿದ್ದ ಟೋಪಿಯನ್ನು ತೆಗೆದು ಬಿಸಾಡಿದ. ಮರದ ಮೇಲಿದ್ದ ಮರಿ ಕೋತಿಯೊಂದು ಓಡಿ ಬಂದು ಆ ಟೋಪಿಯನ್ನು ಸಹ ತೆಗೆದುಕೊಂಡು ಮರ ಹತ್ತಿಯೇ ಬಿಟ್ಟಿತು.

ನಮಗೂ ಅಜ್ಜಂದಿರು ಇದ್ದಾರೆ ... ನಮ್ಮ ಅಜ್ಜಂದಿರು ಸಹ ನಮಗೆ ಈ ಕಥೆಯನ್ನು ಹೇಳಿದ್ದರು ಎಂದು ಮರಿ ಕೋತಿ ಹೇಳಿದ್ದು.

**ಕೋತಿಗಳು ಪಾಠ ಕಲಿಯುತ್ತವೆ ಮತ್ತು ಅಪ್ ಡೇಟ್ ಆಗುತ್ತವೆ ಎಂದಾಯಿತು...! ನೀನಾರಿಗಾದೆಯೋ ಎಲೆ ಮಾನವ....!**

## ಆಗಸ್ಟ್ 19ರ ಸಭೆಯ ಝಲಕ್ .....!



### : ಹಾರ್ದಿಕ ಶುಭಾಶಯಗಳು :



## ಕಾರ್ಯದರ್ಶಿಯವರ ವರದಿ



ತಾರೀಕು 19/8/2025 ಮಂಗಳವಾರದಂದು 7ನೇ ವಾರದ ಸಭೆ ಪರ್ಕಳ ಡೆಂಟಲ್ ಕ್ಲಿನಿಕ್ ಆವರಣದಲ್ಲಿ ನಡೆಯಿತು. ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್ ಕೊರಳಲಾಂಚನ ತೊಡಿಸಿ ಅಧ್ಯಕ್ಷರು ಸಭೆಯನ್ನು ಆರಂಭಿಸಿದರು. ರೊ. ಎ. ಗಣೇಶ್ ಪ್ರಾರ್ಥನೆ ನಡೆಸಿದರು.

ಅಧ್ಯಕ್ಷ ರೊ. ಅನಿಲ್ ಕುಮಾರ್ ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಕಳೆದ ವಾರದ ವರದಿಯನ್ನು ಮಂಡಿಸಿದರು. ಅಧ್ಯಕ್ಷರು ದಾನಿ ಗಿರೀಶ್ ಕುಂದರ್ ಅವರು ರೋಟರಿ ಐಸಿರಿಗೆ ನೀಡಿರುವ ಕೊಡುಗೆಯ ಬಗ್ಗೆ ತಿಳಿಸಿದರು.

ವಲಯ ಸೇನಾನಿ ರೊ. ಸ್ಮಿತಾ ಕಾಮತ್ ಅವರು New Member Orientation ಎಂಬ ಶೀರ್ಷಿಕೆಯಡಿಯಲ್ಲಿ ಹೊಸ ಸದಸ್ಯರಿಗಾಗಿ ರೋಟರಿಯ ಮೂಲಭೂತ ವಿಷಯಗಳ ಬಗ್ಗೆ ಮಾಹಿತಿ ಕಾರ್ಯಕ್ರಮ ನಡೆಸಿದರು. ಹಲವಾರು ಉಪಯುಕ್ತ ರೋಟರಿ ವಿಷಯಗಳ ಬಗ್ಗೆ ಸುಧೀರ್ಘವಾಗಿ ಮಾಹಿತಿಯನ್ನು ಪ್ರಸ್ತುತ ಪಡಿಸಿದರು.

ಹೊಸ ಸದಸ್ಯರಾದ ರೊ. ಕೊರಗಪ್ಪ ಶೆಟ್ಟಿಗಾರ್ ಹಾಗೂ ರೊ. ಸುದರ್ಶನ್ ಪೈ ಇವರು ಮಾಹಿತಿ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ರೊ. ಸ್ವಾತಿ ಪೈ ಇವರು ವಾರದ ಬುಲೆಟಿನ್ ಬಿಡುಗಡೆ ಗೊಳಿಸಿದರು. ಸಂಪಾದಕರಾದ ರೊ. ರಾಜೇಶ್ ಡಿ. ಶೆಣೈ ಅವರು ಸಹಕರಿಸಿದರು.

ಸದಸ್ಯರ ಅನಿಸಿಕೆಯಲ್ಲಿ ರೊ. ಪ್ರಭಾಕರ್ ಶೆಟ್ಟಿ, ರೊ. ಎ. ಗಣೇಶ್, ರೊ. ಸುಕೇಶ್ ಕುಂದರ್ ಹಾಗೂ ರೊ. ಮಂಜುನಾಥ್ ಉಪಾಧ್ಯ ಇವರೆಲ್ಲರೂ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ನಿಯೋಜಿತ ಅಧ್ಯಕ್ಷರು ಇಂಟರಾಕ್ಟ್ ಅಸೆಂಬ್ಲಿಯ ಪೂರ್ವ ತಯಾರಿಯ ಬಗ್ಗೆ ಮಾಹಿತಿ ನೀಡಿ ಎಲ್ಲರ ಸಹಕಾರ ಕೋರಿದರು.

ಲಕ್ಕಿ ರೋಟರಿಯನ್ ಆಯ್ಕೆಯನ್ನು ರೊ. ವಿಠ್ಠಲ ವಾಗ್ಲೆ ನಡೆಸಿದರು. ರೊ. ಕೊರಗಪ್ಪ ಶೆಟ್ಟಿಗಾರ್ ಅವರು ಅದೃಷ್ಟಶಾಲಿಯಾಗಿ ಆಯ್ಕೆಗೊಂಡರು.

ಅಧ್ಯಕ್ಷರು ರೊ. ಸ್ಮಿತಾ ಕಾಮತ್ ಅವರನ್ನು ಉತ್ತಮ ಮಾಹಿತಿ ಕಾರ್ಯಕ್ರಮ ನಡೆಸಿದ್ದಕ್ಕಾಗಿ, ರೊ. ರಾಜೇಶ್ ಡಿ. ಶೆಣೈ ಅವರನ್ನು ವಾರದ ಬುಲೆಟಿನ್ ತಯಾರಿಗಾಗಿ, ಹಾಗೂ ರೊ. ಸ್ವಾತಿ ಪೈ ಅವರನ್ನು ಸ್ಥಳಾವಕಾಶ ನೀಡಿದ್ದಕ್ಕಾಗಿ ಗುರುತಿಸಿದರು.

ಅಧ್ಯಕ್ಷ ರೊ. ಅನಿಲ್ ಕುಮಾರ್ ಮಾತನಾಡಿ ಮಾಹಿತಿ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು ಹಾಗೂ ವಲಯ ಮತ್ತು ಜಿಲ್ಲೆಯ membership seminar ನಲ್ಲಿ ಭಾಗವಹಿಸಲು ಸದಸ್ಯರಲ್ಲಿ ವಿನಂತಿಸಿದರು.

ಮುಂದಿನ ವಾರದ ಸಭೆ 25/8/2025 ಸೋಮವಾರದಂದು ನಡೆಸುವುದಾಗಿ ತಿಳಿಸಿದರು. ದಂಡಪಾಣಿ ಕೊರಳಲಾಂಚನ ತೆಗೆದು ಅಧ್ಯಕ್ಷರು ಸಭೆಯನ್ನು ಮುಂದೂಡಿದರು. ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

**ಗೌರೀ – ಗಣೇಶ ಹಬ್ಬದ ನಿಮಿತ್ತ ರೋಟರಿ ಐಸಿರಿಯ ಎಂಟನೇ ವಾರದ ಸಭೆಯು ಒಂದು ದಿನ ಮುಂಚಿತವಾಗಿ, ಸೋಮವಾರ, ಆಗಸ್ಟ್ 25 ರಂದು ನಡೆಯುವುದು.**

## "ಐಶ್ವರ್ಯ" 7ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕ ಸಂಚಿಕೆಯ ಏಳನೇ ಆವೃತ್ತಿಯನ್ನು ನಮ್ಮ ಸದಸ್ಯೆ, ಪರ್ಕಳ ಡೆಂಟಲ್ ಕ್ಲಿನಿಕನ ರೊ. ಡಾ. ಸ್ವಾತಿ ಪೈಯವರು 19/08/2025 ರಂದು ಬಿಡುಗಡೆ ಗೊಳಿಸಿದರು. ಅಧ್ಯಕ್ಷ ರೊ. ಅನಿಲ್ ಕುಮಾರ್, ನಿಯೋಜಿತ ಅಧ್ಯಕ್ಷ ರೊ. ಸಂದೀಪ್ ಕುಮಾರ್ ಉಪಸ್ಥಿತರಿದ್ದರು.



ರೋಟರಿ ಐಸಿರಿಯ ಏಳನೇ ವಾರದ ಸಭೆಯಲ್ಲಿ ಈ ಅದೃಷ್ಟಶಾಲಿ ರೊಟೇರಿಯನ್ ಆಯ್ಕೆಯನ್ನು ರೊ. ವಿಠ್ಠಲ ವಾಗ್ಲೆ ನಡೆಸಿದರು. ರೊ. ಕೊರಗಪ್ಪ ಶೆಟ್ಟಿಗಾರ್ ಅವರು ಅದೃಷ್ಟಶಾಲಿ ರೋಟರಿಯನ್ ಆಗಿ ಆಯ್ಕೆಯಾದರು.



ರೋಟರಿ ಐಸಿರಿಯ ಏಳನೇ ವಾರದ ಸಭೆಗೆ ಉತ್ತಮ ಸಭಾಂಗಣ ಒದಗಿಸಿದ್ದಕ್ಕಾಗಿ ರೊ. ಡಾ. ಸ್ವಾತಿ ಪೈಯವರನ್ನು ಅಧ್ಯಕ್ಷ ರೊ. ಅನಿಲ್ ಕುಮಾರ್ ಅವರು ಕೃತಜ್ಞತಾ ಪೂರ್ವಕವಾಗಿ ಅಭಿನಂದಿಸಿ ಗೌರವಿಸಿದರು.